ಶ್ರೀ ಎಸ್. ನಂಜಪ್ಪ.—ಮತ್ತೊಬ್ಬ ಸದಸ್ಯರು ಇರುತ್ತಾರೆಂದು ಹೇಳಿರುವುದರಲ್ಲಿ ಹೊಗೆ ಸೊಪ್ಪಿನ ಬೆಳೆಗಾರರ ಪ್ರತಿನಿಧಿಯೋ ಆಥವಾ ವ್ಯಾಪಾರಸ್ಥರ ಪ್ರತಿನಿಧಿಯೋ ಎಂದು ಕೇಳುತ್ತೇನೆ.

ಶ್ರೀ ಎಸ್. ರೇವಣ್ಣ.—ಬೆಳೆಗಾರರ ಪ್ರತಿನಿಧಿಗಳು ಒಬ್ಬರು ಸದಸ್ಯರಾಗಿರುತ್ತಾರೆ.

ಡಾ॥ ಎಚ್. ಎಲ್. ತಿಮ್ಮೇಗೌಡ —10–15 ಕಂಪೆನಿಗಳವರು ಮೈಸೂರು ಟ್ಯೊಬ್ಯಾಕೋ ಕಂಪನಿಯವರಿಗೆ ಸುಮಾರು ನಾಲ್ಕು ಕೋಟಿ ರೂಪಾಯಿಗಳವರೆಗೆ ಹೊಗೇಸೊಪ್ಪನ್ನು ಮಾರಾಟ ಮಾಡಿರುತ್ತಾರೆ. ಪೆರಿಯಾ ಪಟ್ಟಣದಲ್ಲಿರತಕ್ಕಂಥ ಗಣೇಶ ಟ್ಯೊಬ್ಯಾಕೋ ಕಂಪನಿಯವರು ಕೇಂದ್ರ ಬೋರ್ಡ್‌ನಿಂದ ಬಹಳ ಕಡಿಮೆ ಬೆಲೆಯಲ್ಲಿ ಹೊಗೆ ಸೊಪ್ಪನ್ನು ಕೊಂಡು ಮೈಸೂರು ಟ್ಯೊಬ್ಯಾಕೋ ಕಂಪನಿಯವರಿಗೆ ಸುಮಾರು 10–15 ರೂಪಾಯಿಗಳಿಗೆ ಮಾರಾಟ ಮಾಡಿ ಲಕ್ಷಾಂತರ ರೂಪಾಯಿಗಳ ಲಾಭವನ್ನು ಮಾಡಿದ್ದಾರೆ, ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ಎಂದು ಕೇಳುತ್ತೇನೆ. ಎರಡನೆಯದಾಗಿ, ನಮ್ಮ ರಾಜ್ಯದ ಪ್ರತಿನಿಧಿಗಳು ಬೋರ್ಡಿನಲ್ಲಿದ್ದು, ಅವರ ಕಾಲದಲ್ಲಿ ಈರೀತಿಯಾದ ಒಂದು ಅವ್ಯವಹಾರ ನಡೆದಿರಬೇಕಾದರೆ ಅವರು ಸರ್ಕಾರದ ಗಮನಕ್ಕೆ ತರಲಿಲ್ಲವೇ ? ಈರೀತಿ ಅವ್ಯವಹಾರಡಲ್ಲಿ ತೊಡಗಿದ್ದ ಗಣೇಶ ಕಂಪೆನಿಯ ಲೈಸೆನ್ಸ್‌ನ್ನು ರದ್ದುಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ರೇವಣ್ಣ.—ಪರವಾನಗೆಯನ್ನು ವಜಾ ಮಾಡತಕ್ಕಂಥದ್ದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಮತ್ತೆ ಅವರು ಹೊಗೆಸೊಪ್ಪನ್ನು ಕಡಿಮೆ ಬೆಲೆಗೆ ತೆಗೆದುಕೊಂಡು ಹೆಚ್ಚಿನ ಬೆಲೆಗೆ ಮಾರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿಲ್ಲ.

ವಿಷಯ :– ಮೊಳಕಾಲ್ಮೂರಿನಲ್ಲಿರುವ ಕಿರಿಯ ಕಾಲೇಜಿನಲ್ಲಿ ಕೊಠಡಿಗಳ ಕೊರತೆ

ಪ್ರ ಸಂ. 604 (1491) ಶ್ರೀ ಎನ್. ಜಿ. ನಾಯಕ್ (ಮೊಳಕಾಲೂರು)* .––ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ. ಮೊಳಕಾಲ್ಮೂರು ಸರ್ಕಾರಿ ಕಿರಿಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಯಾಗಿದ್ದು ಕೊಠಡಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ. ಈಗ ಸುಮಾರು ಹನ್ನೆರಡು ವರ್ಷಗಳಿಂದಲೂ ಕಿರಿಯ ಕಾಲೇಜನ್ನು ಪ್ರೌಢಶಾಲೆಯಲ್ಲಿ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ. ವಿದ್ಯಾಮಂತ್ರಿಗಳು ಈ ಬಗ್ಗೆ ಆಶ್ವಾಸನೆ ಕೊಟ್ಟಿದ್ದು ನಿಜವೆ ;

ಈ. ಹಾಗಿದ್ದಲ್ಲಿ ಸದರಿ ಆಶ್ವಾಸನೆಯನ್ನು ಈ ಸಾಲಿನಲ್ಲಿ ಈಡೇರಿಸಲಾಗುವುದೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).

ಅ. ಬಂದಿದೆ.

ಆ. ಬಂದಿದೆ.

ಇ. ಹಾದು.

ಈ. ಚಿತ್ರದುರ್ಗ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರಿಂದ 5 ಕೊಠಡಿಗಳ ನಿರ್ಮಾಣಕ್ಕಾಗಿ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಕರೆಯಲಾಗಿದೆ. ಅದು ಬಂದ ನಂತರ ಸೂಕ್ತ ಕ್ರಮ ಕೈ ಗೊಳ್ಳಲಾಗುವುದು.

ಶ್ರೀ ಎನ್. ಜಿ. ನಾಯಕ್.—ಮಾನ್ಯ ಅಧ್ಯಕ್ಷರೇ, ಮೊಳಕಾಲ್ಮೂರು ಸರ್ಕಾರಿ ಕಿರಿಯ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದ್ದು ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಬಂದಿದೆ ಯೆಂದು ತಿಳಿಸಿರುತ್ತಾರೆ. ಕಳೆದ 12 ವರ್ಷಗಳಿಂದಲೂ ಕಟ್ಟಡಗಳ ಕೊರತೆಯಿಂದಾಗಿ ಮರದ ನೆರಳಿನಲ್ಲಿ ನಡೆಸುತ್ತಿರುತ್ತಾರೆ. ಎರಡನೆಯದಾಗಿ, ಸುಮಾರು ಹನ್ನೆರಡು ವರ್ಷಗಳಿಂದಲೂ ಕಿರಿಯ ಕಾಲೇಜನ್ನು ಪ್ರೌಢಶಾಲೆಯಲ್ಲಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಉತ್ತರಿಸಿರುತ್ತಾರೆ. ಈ ಕಾಲೇಜಿನ ಕೊಠಡಿಗಳನ್ನು ಕಟ್ಟಿಸಿಕೊಡಲು ಮರಿಯಮ್ಮ ಎಂಬುವರು ಹನ್ನೆರಡು ವರ್ಷಗಳ ಹಿಂದೆಯೇ 20 ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟಿದ್ದರೂ ಕೂಡ ಇದುವರೆಗೆ ಯಾವ ಕಾರ್ಯಕ್ರಮವನ್ನು ತೆಗೆದು ಕೊಂಡಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರಿಸಬೇಕು. ಕಡೆಯ ಪ್ರಶ್ನೆಗೆ

ಉತ್ತರಿಸುತ್ತಾ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತ್ರರಿಂದ 5 ಕೊಠಡಿಗಳ ನಿರ್ಮಾಣಕ್ಕಾಗಿ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ಕೇಳಲಾಗಿದ್ದು ಅವರು ಕಳುಹಿಸಿಕೊಟ್ಟಿದ್ದಾರೆಂದು ತಿಳಿಸಿರುತ್ತಾರೆ. ಇದು ಯಾವ ವರ್ಷದಲ್ಲಿ ಕಳುಹಿಸಿಕೊಟ್ಟಿದ್ದಾರೆ ? ಎಷ್ಟು ಅಂದಾಜು ಹಣವನ್ನು ಕೊಟ್ಟಿದ್ದಾರೆ ? ಏತಕ್ಕೋಸ್ಕರವಾಗಿ ಇಷ್ಟೊಂದು ವಿಳಂಬವಾಗುತ್ತಿದೆ ? ಇಷ್ಟೊಂದು ತೊಂದರೆ ಇದ್ದರೂ ಈ ವರ್ಷದ ಬಡ್ಜೆಟಿನಲ್ಲಿ ಏತಕ್ಕೆ ಸೇರಿಸಿಲ್ಲ ? ನಮ್ಮ ತಾಲ್ಲೂಕು ಹಿಂದುಳಿದ ತಾಲ್ಲೂಕು ಎನ್ನುವುದು ಸಚಿವರಿಗೂ ತಿಳಿದಿರತಕ್ಕಂಥ ವಿಷಯವಾಗಿದ್ದರೂ, ಅವರೂ ಕೂಡ ಹಿಂದುಳಿದವರಾಗಿದ್ದರೂ ಏತಕ್ಕೆ ಇಷ್ಟೊಂದು ವಿಳಂಬಮಾಡುತ್ತಿದ್ದಾರೆಂದು ಕೇಳುತ್ತೇನೆ ? ಈಗಲಾದರೂ ಕೊಠಡಿಗಳ ಕೊರತೆಯನ್ನು ನೀಗಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಈ ಸಾರಿ 5 ಕೊಠಡಿಗಳನ್ನು ಕಟ್ಟಿಸಿಕೊಡುವುದಕ್ಕೆ ಲೋಕೋಪಯೋಗಿ ಇಲಾಖೆಯವರಿಗೆ ಹೇಳಿದ್ದೇನೆ. ಈ ಕಟ್ಟಡವನ್ನು ಕಟ್ಟಿಸುವ ಸಲುವಾಗಿ ಶ್ರೀಮತಿ ಮರಿಯಮ್ಮನವರು 20 ಸಾವಿರ ರೂಪಾಯಿಗಳ ಧನಸಹಾಯವನ್ನು ಏನು ಮಾಡಿರುತ್ತಾರೆ ಅದನ್ನು ನಮ್ರತೆಯಿಂದ ಸ್ವೀಕರಿಸಿ, ಆ ಹಣವನ್ನು ಸದುಪಯೋಗ ಪಡಿಸಿಕೊಳ್ಳಲು ಪ್ರಯತ್ನಮಾಡುತ್ತೇನೆ.

ವಿಷಯ :– ಬೆಳಗಾಂನಲ್ಲಿರುವ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ನಡಸಲಾಗುತ್ತಿರುವ ತರಗತಿಗಳು.

ಪ್ರ. ಸಂ. 605(1543) ಶ್ರೀ ಆರ್. ಸಿ. ಬಾಳೀಕುಂದರಗಿ (ಬೈಲಹೊಂಗಲ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆವಿಟ್ಟು ಉತ್ತರಿಸುವರೆ :–

ಅ. ಬೆಳಗಾಂ ಜಿಲ್ಲೆಯಲ್ಲಿನ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಅನೇಕ ವರ್ಷಗಳಿಂದ ಬೆಳಗ್ಗೆ ಹಾಗೂ ಸಂಜೆ ತರಗತಿಗಳನ್ನು ನಡೆಸುತ್ತಿದ್ದುದು ನಿಜವಲ್ಲವೇ ;

ಆ. ಕೆಲವು ಸಮಯದಿಂದ ಈ ವಿಧಾನವನ್ನು ಬದಲಾಯಿಸಿರುವುದು ನಿಜವೇ ;

ಇ. ಇದರಿಂದಾಗಿ ಶಾಲೆಯ ಮಕ್ಕಳಿಗೆ ತೊಂದರೆಯಾಗಿರುವುದು ಸರಕಾರದವರಿಗೆ ಗೊತ್ತಿದೆಯೇ;

ಈ. ಹಾಗಿದ್ದಲ್ಲಿ, ಈ ವಿಧಾನವನ್ನು ಬದಲಾಯಿಸಿ ಮೊದಲು ನಡೆಯುತ್ತಿದ್ದಂತೆಯೇ ತರಗಳನ್ನು ನಡೆಸುವಂತೆ ಮಾಡಲು ಸರ್ಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) :–

ಅ. ಹೌದು.

ಆ. ಹೌದು.

ಇ. ಇದುವರೆಗೂ ಯಾವ ದೂರೂ ಬಂದಿಲ್ಲ.

ಈ. ಬೇಡಿಕೆ ಬಂದಲ್ಲಿ ಪರಿಗಣಿಸಲಾಗುವುದು.

ವಿಷಯ :– ಬೀರೂರಿನ ಸರ್ಕಾರಿ ಬಾಲಕೀಯರ ಪ್ರೌಢಶಾಲೆಯ ಕಟ್ಟಡವನ್ನು ದುರಸ್ತಿಗೊಳಿಸುವುದು.

ಪ್ರ. ಸಂ. 606 (1574) ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬಿರೂರು).–ಮಾನ್ಯ ಶಿಕ್ಷಣ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ. ಬೀರೂರಿನಲ್ಲಿರುವ ಸರ್ಕಾರಿ ಬಾಲಕಿಯರ ಮಾಧ್ಯಮಿಕ ಶಾಲೆ ಮತ್ತು ಸರ್ಕಾರಿ ಬಾಲಕರ ಪ್ರಾಥಮಿಕ ಶಾಲಾ ಕಟ್ಟಡಗಳು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ. ಹಾಗಿದ್ದಲ್ಲಿ, ಮುಂದಿನ ಶೈಕ್ಷಣಿಕ ವರ್ಷ ದೊಳಗಾಗಿ ಆ ಕಟ್ಟಡಗಳನ್ನು ರಿಪೇರಿ ಮಾಡಿಸಲು ಸರ್ಕಾರ ಕ್ರಮಕ್ಕೆಗೊಳ್ಳುವುದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) :–

ಅ. ಹೌದು.

ಆ. ಲೋಕೋಪಯೋಗಿ ಇಲಾಖೆಯವರನ್ನು ತುರ್ತು ರಿಪೇರಿ ಕೈಗೊಳ್ಳಲು ಕೋರಲಾಗಿದೆ.

---

* ಮಾನ್ಯ ಸದಸ್ಯರು ಹಾಜರಿರಲಿಲ್ಲ